"ಸುಂನಿರು ಅತ್ತೆ, ಹೊತ್ತಾಯ್ತು. ಕೊನೇ ಬೆಲ್ ಹೊಡೆದ್ಬಿಟ್ರೇ, ಆ ಹೆಡ್ಮಾಸ್ತರ್ ಬಾಗಿಲು ಎಳೆದು ಮುಚ್ಚಿಬಿಡ್ತಾರೆ. ಆಮೇಲೆ ಬೆತ್ತದ ಏಟು ತಿಂದೇ ಒಳಗೆ ಹೋಗಬೇಕು."

"ಹಾಗಾದ್ರೆ ನಿನಗೆ ಈವತ್ತು ಗ್ಯಾರಂಟಿ ಬೆತ್ತದ ಏಟಿದೆ ಅಂತ ಹೇಳು."

"ಅಷ್ಟರೊಳಗೆ ನಾನು ಹೋಗ್ತೀನಿ..."

"ಮನೆ ಪಾಠ ಎಲ್ಲಾ ಮಾಡಿದ್ಯೇನೋ?" ಎಂದು ಮತ್ತೆ ಕೇಳಿದಳು ಅತ್ತೆ.

ಅಮ್ಮ ಒಳಗಿಂದ ಬಂದು "ಅವನ ಜತೆ ಕೀಟಲೆ ಮಾಡೋದಿಕ್ಕೆ ಹೊತ್ತುಗೊತ್ತು ಇಲ್ವೇನೇ ನಿನಗೆ? ಬಿಡೇ ಅವನ್ನ" ಎಂದಳು. ಕುಂಡದಲ್ಲಿ ತಂದ ಅನ್ನವನ್ನು ಮತ್ತೆ ತೊಟ್ಟಿ ಮಾಡುವವರ ಎಲೆಗೆ ಬಡಿಸಿ ಸಾರನ್ನು ಸುರಿದಳು.

ನಾನು ಬಟ್ಟೆ ಬದಲಿಸಿ ಬರುವುದರೊಳಗೆ ಅವರು ಊಟ ಮಾಡಿ ಮುಗಿಸಿದ್ದರು. ಒಂದು ಕಲ್ಲನ್ನು ಉರುಳಿಸಿ ತಂದು ಮಣ್ಣಿಲ್ಲದೆ ಶುದ್ಧವಾಗಿ ತೊಳೆದು, ಗೋಣಿಚೀಲವನ್ನು ಮಗುಚಿದರು. ಹಲವಾರು ಅಳತೆಗಳ, ಉದ್ದಗಳ ಬಹಳಷ್ಟು ಉಳಿ, ಸುತ್ತಿಗೆ, ಕಂಬಿಗಳು, ಹಲಗೆಗಳು. ಒಂದು ಹಲಗೆಯೊಂದಿಗೆ ಹಿಂತಿರುಗಿದವರು ನನ್ನನ್ನು ನೋಡಿ, "ಚಿಕ್ಕಬುದ್ಧಿ, ಶಾಲೆಗೆ ಹೊರಟ್ರಾ?" ಎಂದು ಕೇಳಿದರು. ತಕ್ಷಣ "ಹೌದು" ಎಂದು ತಲೆಯಾಡಿಸುತ್ತ, "ಅದು ಏನು?" ಎಂದು ವಿಚಾರಿಸಿದೆ.

"ಇದೇ, ಶಿವನ ತ್ರಿಶೂಲ, ಮುರುಗನ ಶೂಲ, ರಾಮನ ಬಿಲ್ಲಿನ ತರಹ ಇದು ನಮ್ಮ ಆಯುಧ. ಅಳಿಯೋ ಆಯುಧ. ಎಲ್ಲಕ್ಕೂ ಅಳತೆ ಮುಖ್ಯ ಅಲ್ವೇ?" ಎಂದರು ನಗುತ್ತ. ನಂತರ ಅವರು, "ಎಷ್ಟನೇ ಕ್ಲಾಸು? ಎಂದು ಕೇಳಿದರು. ನಾನು ಹೆಮ್ಮೆಯಿಂದ ಎದೆ ಎತ್ತಿಕೊಂಡು "ಐದನೇ ಕ್ಲಾಸು" ಎನ್ನುತ್ತಾ ಐದು ಬೆರಳುಗಳನ್ನು ತೋರಿಸಿದೆ. ಅಷ್ಟರಲ್ಲಿ ಅಮ್ಮ ಹೆಸರಿಡಿದು ಕರೆಯುವುದು ಕೇಳಿಸಿತು. 'ಸಾಯಾಂಕಾಲ ನೋಡೋಣಾ' ಅಂತ ಸನ್ನೆಯಲ್ಲಿಯೇ ಅವರಿಗೆ ಹೇಳಿ ಹೊರಟೆ. ತಟ್ಟೆಯಲ್ಲಿದ್ದ ಅನ್ನವನ್ನು ಬೇಗನೆ ತಿಂದು ಮುಗಿಸಿ ಕೈಯನ್ನು ತೊಳೆದುಕೊಂಡೆ. ಮೊಳೆಗೆ ತಗಲು ಹಾಕಿದ್ದ ಚೀಲವನ್ನು ತೆಗೆದುಕೊಂಡು, "ಅಮ್ಮ ಬರ್ತೀನಿ. ಅಜ್ಜಿ ಬರ್ತೀನಿ. ಅತ್ತೆ ಬರ್ತೀನಿ" ಎಂದು ರಾಗ ಎಳೆಯುತ್ತಾ ಹೇಳಿ ಹೊರಗೆ ಓಡಿದೆ.

ಶಾಲೆಯಲ್ಲಿ ಯಾವ ಪಾಠವೂ ಮನಸ್ಸಿಗೆ ನಾಟಲಿಲ್ಲ. ಮಗ್ಗಿಯ ಸಂಖ್ಯೆಗಳನ್ನು ಬಾಯಿ ಹೇಳುತ್ತಿತ್ತೇ ಹೊರತು ಚಿಂತೆಯೆಲ್ಲಾ ಕಲ್ಲು ತೊಟ್ಟಿಯ ಕಲ್ಪನೆಯಲ್ಲಿಯೇ ಮುಳುಗಿತ್ತು. ತರಗತಿಗಳು ಮುಗಿದು ಮೇಷ್ಟ್ರುಗಳು ಬದಲಾಗುತ್ತಿದ್ದರು. ಕಪ್ಪು ಹಲಗೆಯ ಮೇಲೆ ಬರೆದರು. ಕಥೆ ಹೇಳಿದರು. ನಕ್ಕರು. ವಿಜ್ಞಾನ ತರಗತಿಯಲ್ಲಿ ಉಮ್ಮತ್ತಿ ಹೂವಿನ ಚಿತ್ರವನ್ನು ಒಬ್ಬ ಹುಡುಗ ಬಿಡಿಸಿ, ಭಾಗಗಳ ಹೆಸರನ್ನು ಬರೆದು ಕುಳಿತಾಗ ಮೇಷ್ಟ್ರು ಆ ಚಿತ್ರವನ್ನು ತೋರಿಸಿ ಪಾಠಮಾಡಿದರು. ಯಾವುದನ್ನೂ ನಾನು ಗಮನಿಸಲಿಲ್ಲ. ಊಟದ ಸಮಯದಲ್ಲೂ ಸಹ ಯಾರ ಜತೆಯೂ ಸೇರದೆ, ಆಟ ಆಡಲೂ ಹೋಗದೆ ಒಂಟಿಯಾಗಿ ಕನಸುಗಳಲ್ಲಿ ತೇಲುತ್ತಿದ್ದೆ.

ಸಂಜೆ ಶಾಲೆ ಮುಗಿದ ಕೂಡಲೇ ಒಂದೇ ಓಟವಾಗಿ ಓಡಿ ಬಂದು ಮನೆ ಸೇರಿದಾಗ ಏದುಸಿರುಬಿಟ್ಟೆ. ಮೊಳೆಯಲ್ಲಿ ಚೀಲವನ್ನು ತೂಗು ಹಾಕಿ ತೋಟದ ಕಡೆ ಬಂದೆ. ಕಲ್ಲು, ದೊಡ್ಡ ಉಬ್ಬಿದ ನಾಲ್ಕು ಮೂಲೆಯ ಪೆಟ್ಟಿಗೆಯಂತೆ ತೊಟ್ಟಿಮಾಡುವವರ ಮುಂದೆ ಕಂಡಿತು. ಕಲ್ಲಿಂದ ಕೆತ್ತಿದ ಸಣ್ಣಪುಟ್ಟ ತುಣುಕುಗಳು ಅವರ ಸುತ್ತ ಬಿದ್ದಿದ್ದವು.

"ಒಂದು ಪೆಟ್ಟಿಗೆ ಥರ ಮಾಡಿಬಿಟ್ರಲ್ಲ..." ಎಂದೆ.

"ಹಾ... ಚಿಕ್ಕ ಬುದ್ಧಿ? ಶಾಲೆಯಿಂದ ಬಂದಾಯ್ತಾ?" ಎಂದು ನನ್ನನ್ನು ನೋಡಿ ಕೇಳಿದರು. ನಾನು ತಲೆಯಾಡಿಸಿ ನಕ್ಕೆ. "ತೊಟ್ಟಿನಾ ಯಾವಾಗ ಮಾಡಿ ಮುಗಿಸ್ತೀರಾ?" "ಈಗ ಪೆಟ್ಟಿಗೆ ಥರ ಇರೋದು,